29th August is celebrated as ***National Sports Day*** in India every year, commemorating the Birth Day of our **Hockey wizard Dhyan Chand**. In order to make this day more memorable, our Prime minister has inaugurated a Nation Wide Fit India Movement with an aim to encourage people to give priority to sports and fitness in life. He is of the opinion that people are leading a very stressful life in the present scenario, facing lot of health issues like High blood pressure, Diabetes etc., In order to come out of these issues and to develop Healthy India, there is a need to practise Yoga, Physical exercise, involving oneself in sports activity.

The live telecast was viewed in the College auditorium in the presence of Prof B.V Sambashivaiah, Chief executive of the College, Prof. M. Mahadevappa, Principal and more than 1000 students, teaching and non-teaching staff.

**(Prof. M Mahadevappa)**
**Principal**

**To**
**Editor**
..............................................
..............................................
**Mysuru**

ಜೆಎಸ್‌ಎಸ್ ಮಹಾವಿದ್ಯಾಪೀಠ
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ)
ಬಿ.ಎನ್. ರಸ್ತೆ, ಮೈಸೂರು –570025
ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ
ಪ್ರಜ್ಞೆನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

☎: 0821-2548236, 2548380 Fax: 0821-2548238 e-mail: jssautonomous@gmail.com

ದಿನಾಂಕ 29.8.2019

ಪ್ರಕಟಣೆಯ ಕೃಪೆಗಾಗಿ

## ಜೆಎಸ್‌ಎಸ್ ಕಾಲೇಜಿನಲ್ಲಿ ಫಿಟ್ ಇಂಡಿಯಾ ಕಾರ್ಯಕ್ರಮ ನೇರವೀಕ್ಷಣೆ

ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ದೇಶದ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಹೊಸದೆಹಲಿಯ ಇಂದಿರಾಗಾಂಧಿ ಕ್ರೀಡಾಂಗಣದ ಸಂಕೀರ್ಣದಲ್ಲಿ ಫಿಟ್ ಇಂಡಿಯಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಕಾರ್ಯಕ್ರಮದ ನೇರಪ್ರಸಾರದ ವೀಕ್ಷಣೆಯನ್ನು ಏರ್ಪಡಿಸಲಾಗಿತ್ತು.

ರಾಷ್ಟ್ರೀಯ ಕ್ರೀಡೆಯಾದ ಹಾಕಿಯಲ್ಲಿ ಅಪ್ರತಿಮ ಸಾಧನೆ ತೋರಿರುವ ಹಾಕಿ ಮಾಂತ್ರಿಕ ಧ್ಯಾನ್‌ಚಂದ್ ಅವರ 114ನೇ ಜನ್ಮದಿನದ ಅಂಗವಾಗಿ ಇಂದು ದೇಶಾದ್ಯಂತ ರಾಷ್ಟ್ರೀಯ ಕ್ರೀಡಾದಿನವನ್ನು ಆಚರಿಸಲಾಗುತ್ತಿದೆ. ಈ ದಿನವನ್ನು ಮತ್ತಷ್ಟು ಅರ್ಥಪೂರ್ಣವಾಗಿಸುವ ದಿಸೆಯಿಂದ ಇಂದು ಪ್ರಧಾನಮಂತ್ರಿಗಳು ಫಿಟ್ ಇಂಡಿಯಾ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ. ಆರೋಗ್ಯವಂತ ಯುವಕರು ದೇಶದ ಸಂಪತ್ತಾಗಿದ್ದಾರೆ. ಜೀವನ ವಿಧಾನದ ಏರುಪೇರಿನಿಂದ ಜನತೆ ಸಕ್ಕರೆ ಖಾಯಿಲೆ, ರಕ್ತದೊತ್ತಡ ಮೊದಲಾದವುಗಳಿಗೆ ಒಳಗಾಗುತ್ತಿದ್ದಾರೆ. ಇಂತಹವುಗಳಿಂದ ಹೊರಬರಬೇಕಾದರೆ ಯೋಗ, ವ್ಯಾಯಾಮ, ಒತ್ತಡ ನಿರ್ವಹಣೆ, ಉತ್ತಮ ಜೀವನ ವಿಧಾನದಿಂದ ದೇಹ ಮತ್ತು ಮನಸ್ಸನ್ನು ಆರೋಗ್ಯವಾಗಿ ಇಟ್ಟು ಕೊಳ್ಳಬೇಕು. ಮೂಲಕ ದೇಶದ ಸ್ವಾಸ್ಥ್ಯವನ್ನು ಕಾಪಾಡಬೇಕೆಂದು ಪ್ರಧಾನಿಯವರು ಕರೆ ಕೊಟ್ಟರು.

ಈ ನೇರಪ್ರಸಾರದ ವೀಕ್ಷಣೆ ಕಾರ್ಯಕ್ರಮದಲ್ಲಿ ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು, ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ೧೦೦೦ಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಗೆ,
ಸಂಪಾದಕರು
-------------------

ಪ್ರಾಂಶುಪಾಲರು



ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ)

ಬಿ.ಎನ್. ರಸ್ತೆ, ಮೈಸೂರು –570025

ನ್ಯಾಕ್‌ನಿಂದ 'ಎ ದರ್ಜೆ ಮಾನ್ಯತೆ ಪಡೆದಿದೆ

ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

☎: 0821-2548236, 2548380 Fax: 0821-2548238 e-mail: jssautonomous@gmail.com

ದಿನಾಂಕ 29.02.2020

ಪ್ರಕಟಣೆಯ ಕೃಪೆಗಾಗಿ

## ಸಮಾಜಕ್ಕಾಗಿ ಮತ್ತು ಆತ್ಮತೃಪ್ತಿಗಾಗಿ ಸಂಶೋಧನೆ ಮಾಡಿ

ಪ್ರೊ. ಜಿ. ಹೇಮಂತ್‌ಕುಮಾರ್

"ಯಾವುದೇ ಜ್ಞಾನಶಾಖೆ ತನ್ನಷ್ಟಕ್ಕೆ ಪರಿಪೂರ್ಣವಾಗುವುದಿಲ್ಲ. ಅದು ಇತರೆ ಜ್ಞಾನಶಾಖೆಗಳ ಜೊತೆ ಸಂಪರ್ಕ ಹೊಂದಿದಾಗ ಅದರ ಪರಿಣಾಮ ಉತ್ತಮವಾಗಿರುತ್ತದೆ. ಇಂದು ಅಂತರಶಿಸ್ತೀಯ ಸಂಶೋಧನೆಯ ಅಗತ್ಯತೆ ಇದ್ದು ಸಮಾಜಕ್ಕಾಗಿ ಮತ್ತು ಆತ್ಮತೃಪ್ತಿಗಾಗಿ ಸಂಶೋಧನೆ ಕೈಗೊಳ್ಳಿ" ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಜಿ. ಹೇಮಂತ್‌ಕುಮಾರ್ ಅವರು ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಯುಜಿಸಿ ಪ್ರಾಯೋಜಿತ ಸಿಪಿಇ ಯೋಜನೆಯಡಿ ಏರ್ಪಡಿಸಿದ್ದ ನಾಲ್ಕು ದಿನಗಳ ಸಮಕಾಲೀನ ವಿಷಯಾಧಾರಿತ ಉಪನ್ಯಾಸ ಮಾಲೆಯ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. "ಅಧ್ಯಾಪಕರಾದವರು ಕೇವಲ ಬೋಧನೆಗಾಗಿ, ಸಂಶೋಧನೆಗಾಗಿ ಓದುವುದಲ್ಲ. ನಿಯತವಾಗಿ ಓದುವ ಹವ್ಯಾಸವನ್ನು ರೂಢಿಸಿಕೊಳ್ಳಬೇಕು. ಆಗ ಹೊಸ ಹೊಸ ವಿಚಾರಗಳ, ಇತರೆ ಜ್ಞಾನ ಶಾಖೆಗಳ ಪರಿಚಯವಾಗುತ್ತದೆ. ಆಗ ನಿಮ್ಮ ಬೋಧನೆಯ ಗುರಿ ಸ್ಪಷ್ಟವಾಗುತ್ತದೆ. ಯಾರಿಗೆ ಹೇಗೆ ಬೋಧಿಸಬೇಕೆಂಬುದು ತಿಳಿಯುತ್ತದೆ" ಎಂದರು

ಸಮಾರೋಪ ಭಾಷಣ ಮಾಡಿದ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಲ್. ಜವಹಾರ್ ನೇಸನ್‌ರವರು "ಜ್ಞಾನಕ್ಕೆ ಗಡಿ ಎಂಬುದಿಲ್ಲ. ಜ್ಞಾನವನ್ನು ಯಾವ ಕಡೆಯಿಂದಲಾದರೂ, ಎಷ್ಟು ಬೇಕಾದರೂ ಪಡೆಯಬಹುದು. ಹಾಗೇ ಪಡೆಯಬೇಕಾದರೆ ಯಾವುದೇ ಒಂದು ವಿಷಯಕ್ಕೆ ಸೀಮಿತಗೊಳ್ಳದೆ ಹಲವಾರು ವಿಷಯಗಳ ಜ್ಞಾನವನ್ನು ಪಡೆಯಲು ಶ್ರಮಿಸಬೇಕು. ವೈದ್ಯಕೀಯ ಅಧ್ಯಯನ ಮಾಡುವವರಿಗೆ ದೇಶದ ಆರ್ಥಿಕ ಸ್ಥಿತಿಯ ಪರಿಚಯವೂ ಇರಬೇಕು. ಜ್ಞಾನ ಎಂದರೆ ಕೇವಲ ಓದಲ್ಲ, ಅದು ಅನುಭವ. ಸಮಾಜದೊಂದಿಗೆ ಬೆರೆಯಬೇಕು, ಅಲ್ಲಿನ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಬೇಕು., ಅದರ ಪರಿಹಾರಕ್ಕೆ ನಮ್ಮ ಅಧ್ಯಯನ ಉಪಯೋಗವಾಗಬೇಕು. ಅದು ಮಾತ್ರವೇ ನಿಜವಾದ ಅಧ್ಯಯನ ಮತ್ತು ಸಂಶೋಧನೆ ಆಗುತ್ತದೆ. ಆದರೆ ಇಂದಿನ ಶಿಕ್ಷಣದ ಗುರಿ ಸಮರ್ಪಕವಾಗಿಲ್ಲದಿರುವುದರಿಂದ ಅದು ಮಾನವೀಯತೆ ಬೆಳೆಸಲು ಅಸಮರ್ಥವಾಗಿದೆ. ಈ ದಿಸೆಯಲ್ಲಿ ಸಮಾಜೋಪಯೋಗಿ ಅಧ್ಯಯನ ಮತ್ತು ಸಂಶೋಧನೆ ನಡೆಯಲಿ" ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಸಮಿತಿಯ ನಿರ್ದೇಶಕರಾದ ಡಾ. ಎಸ್. ಶ್ರೀಕಂಠಸ್ವಾಮಿಯವರು ಮಾತನಾಡಿ "ವಿಜ್ಞಾನಕ್ಕೆ ಇಂದು ಹಲವು ತೆರನಾದ ಸಾಮರ್ಥ್ಯವಿದೆ. ಮಾನವನ ಬದುಕಿಗೆ ತಕ್ಕಂತೆ ವಿಜ್ಞಾನವೂ ಬದಲಾವಣೆ ಹೊಂದುತ್ತಾ ಹೋಗುತ್ತಿದೆ. ವಿಜ್ಞಾನದ ಮೂಲಕ ಬದುಕು ಕೂಡ ಹಸನಾಗಿದೆ. ಇಂದು ಕೇವಲ ತರಗತಿ ಶಿಕ್ಷಣ ಸಾಕಾಗುವುದಿಲ್ಲ. ಸಾಮಾಜಿಕ ಶಿಕ್ಷಣ ಅತ್ಯಗತ್ಯವಾಗಿದೆ. ಸಮಾಜದೊಂದಿಗೆ ಮುಖಾಮುಖಿಯಾಗಲು ಇಂತಹ ಉಪನ್ಯಾಸಗಳ ಅಗತ್ಯತೆ ಇದೆ" ಎಂದರು

ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು ಸ್ವಾಗತಿಸಿದರು. ಕು. ಸ್ಪಂದನ ಪ್ರಾರ್ಥಿಸಿದರು. ಡಾ. ಎಂ. ಪೂರ್ಣಿಮ ಕಾರ್ಯಕ್ರಮ ನಿರೂಪಿಸಿದರು. ಡಾ. ಆರ್. ಸುಹಾಸ್ ವಂದಿಸಿದರು. ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು, ಸಂಚಾಲಕರಾದ ಡಾ. ಬಿ.ವೈ. ಸತೀಶ್‌ಕುಮಾರ್ ಉಪಸ್ಥಿತರಿದ್ದರು.

ನಾಲ್ಕು ದಿನಗಳವರೆಗೆ ನಡೆದ ಈ ಉಪನ್ಯಾಸ ಮಾಲೆಯಲ್ಲಿ ಭೌತಿಕ ವಿಜ್ಞಾನ, ಜೈವಿಕ ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಮಾನವಿಕ ಶಾಸ್ತ್ರ ಹಾಗೂ ವಾಣಿಜ್ಯ ಮತ್ತು ನಿರ್ವಹಣೆ ಕುರಿತು ದೇಶದ ವಿವಿಧ ವಿಶ್ವವಿದ್ಯಾಲಯಗಳ ಸಂಪನ್ಮೂಲ ವ್ಯಕ್ತಿಗಳು ಉಪನ್ಯಾಸ ನೀಡಿದರು. 500ಕ್ಕೂ ಅಧಿಕ ಮಂದಿ ಉಪನ್ಯಾಸಕರು ಪಾಲ್ಗೊಂಡರು.


ಪ್ರಾಂಶುಪಾಲರು

ಗೆ,

ಸಂಪಾದಕರು

__________________

________________


JSS MAHAVIDYAPEETHA
JSS COLLEGE OF ARTS, COMMERCE AND SCIENCE
UGC Sponsored Programme for Enrichment of Teachers under CPE Scheme
FOUR-DAY FRONTIER LECTURE SERIES
on
PHYSICAL SCIENCES, BIOLOGICAL SCIENCES
SCIENCES & HUMANITIES and COMMERCE
JSS COLLEGE OF ARTS
UGC Sponsored Programme for
Teachers under CPE Scheme

ಜೆಎಸ್‌ಎಸ್ ಮಹಾವಿದ್ಯಾಪೀಠ
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ)
ಬಿ.ಎನ್. ರಸ್ತೆ, ಮೈಸೂರು –570025
ನ್ಯಾಕ್‌ನಿಂದ 'ಎ ದರ್ಜೆ ಮಾನ್ಯತೆ ಪಡೆದಿದೆ
ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

☎: 0821-2548236, 2548380 Fax: 0821-2548238 e-mail: jssautonomous@gmail.com

ದಿನಾಂಕ 14.3.2019

## ಪ್ರಕಟಣೆಯ ಕೃಪೆಗಾಗಿ

# ವಿದ್ಯೆಗಿಂತ ನಡತೆ ಮುಖ್ಯ

–ಡಾ. ಕೆಎಸ್‌ಎಂಎಸ್ ರಾಘವರಾವ್

"ಅಕ್ಷರ ಜ್ಞಾನಕ್ಕಿಂತ ಉತ್ತಮ ನಡತೆಯು ಇಂದಿನ ಅಗತ್ಯವಾಗಿದೆ. ಒಳ್ಳೆಯ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಸಮಾಜ ಅಂಥವರನ್ನು ಗೌರವಿಸುತ್ತದೆ. ಉದ್ಯೋಗವು ಹರಸಿ ಬರುತ್ತದೆ" ಎಂದು ಸಿಎಸ್‌ಐಆರ್ – ಸಿಎಫ್‌ಟಿಆರ್‌ಐ ನಿರ್ದೇಶಕರಾದ ಡಾ. ಕೆಎಸ್‌ಎಂಎಸ್ ರಾಘವರಾವ್ ಅವರು ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಜೈವಿಕ ತಂತ್ರಜ್ಞಾನ ಸ್ನಾತಕೋತ್ತರ ವಿಭಾಗವು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಹುದುಗುವಿಕೆ ಪ್ರಕ್ರಿಯೆ ಮತ್ತು ದ್ರವ ವರ್ಣಶಾಸ್ತ್ರ' ಎಂಬ ವಿಷಯ ಕುರಿತ ಮೂರು ದಿನಗಳ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. "ಉತ್ಪನ್ನ, ಉತ್ಪಾದನೆಯಲ್ಲಿ ಪ್ರಮಾಣಕ್ಕಿಂತ ಗುಣಮಟ್ಟ ಮುಖ್ಯ. ಹುದುಗುವಿಕೆ ಮತ್ತು ದ್ರವವರ್ಣ ವಿಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ಇದನ್ನು ಕಾಪಾಡಿಕೊಳ್ಳಬಹುದು " ಎಂದರು.

ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಮಾತನಾಡಿ "ನಾಗರೀಕತೆಯ ಪ್ರಾರಂಭದಿಂದಲೂ ಹುದುಗುವಿಕೆ ಮತ್ತು ದ್ರವವರ್ಣ ವ್ಯವಸ್ಥೆಯನ್ನು ನಮ್ಮವರು ಅಳವಡಿಸಿಕೊಂಡು ಬಂದಿದ್ದಾರೆ. ಈ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆಯಬೇಕು" ಎಂದರು.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಾದ ಡಾ. ಎ.ಎಂ. ರಮೇಶ್ ಅವರು ಮಾತನಾಡಿ "ಕೃಷಿ ಕ್ಷೇತ್ರದಲ್ಲಿ ಜೈವಿಕ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಪೌಷ್ಟಿಕಾಂಶವುಳ್ಳ ಆಹಾರಗಳನ್ನು ಬೆಳೆಯಬೇಕು. ಯುವ ಪೀಳಿಗೆ ಇದರ ಬಗ್ಗೆ ಹೆಚ್ಚು ಗಮನ ಹರಿಸಿ ಕೃಷಿ ಕ್ಷೇತ್ರದ ಅಭಿವೃದ್ಧಿ ಮತ್ತು ಉತ್ತಮ ಆಹಾರ ಬೆಳವಣಿಗೆಯತ್ತ ಗಮನಹರಿಸಬೇಕು" ಎಂದರು

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು ಸ್ವಾಗತಿಸಿದರು. ವಿಭಾಗದ ಮುಖ್ಯಸ್ಥರಾದ ಡಾ. ಬಿ.ವೈ. ಸತೀಶ್‌ಕುಮಾರ್ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿ ವಿಚಾರ ಸಂಕಿರಣದ ಬಗ್ಗೆ ಮಾಹಿತಿ ನೀಡಿದರು. ಶ್ರೀ ಜಯಸಿಂಹ ಮತ್ತು ತಂಡದವರು ಪ್ರಾರ್ಥಿಸಿದರು. ಕು. ಎಸ್. ನಿಧಿ ವಂದಿಸಿದರು. ಕು. ಚಿಂತನ ನಿರೂಪಿಸಿದರು.

ಗೆ,
ಸಂಪಾದಕರು
-------------------

ಪ್ರಾಂಶುಪಾಲರು

ಜೆಎಸ್‌ಎಸ್ ಮಹಾವಿದ್ಯಾಪೀಠ
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ)
ಬಿ.ಎನ್. ರಸ್ತೆ, ಮೈಸೂರು –570025
ನ್ಯಾಕ್‌ನಿಂದ 'ಎ ದರ್ಜೆ ಮಾನ್ಯತೆ ಪಡೆದಿದೆ
ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

☎: 0821-2548236, 2548380 Fax: 0821-2548238 e-mail: jssautonomous@gmail.com

ದಿನಾಂಕ 14.3.2019

## ಪ್ರಕಟಣೆಯ ಕೃಪೆಗಾಗಿ

# ವಿದ್ಯೆಗಿಂತ ನಡತೆ ಮುಖ್ಯ

–ಡಾ. ಕೆಎಸ್‌ಎಂಎಸ್ ರಾಘವರಾವ್

"ಅಕ್ಷರ ಜ್ಞಾನಕ್ಕಿಂತ ಉತ್ತಮ ನಡತೆಯು ಇಂದಿನ ಅಗತ್ಯವಾಗಿದೆ. ಒಳ್ಳೆಯ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಸಮಾಜ ಅಂಥವರನ್ನು ಗೌರವಿಸುತ್ತದೆ. ಉದ್ಯೋಗವು ಹರಸಿ ಬರುತ್ತದೆ" ಎಂದು ಸಿಎಸ್‌ಐಆರ್ – ಸಿಎಫ್‌ಟಿಆರ್‌ಐ ನಿರ್ದೇಶಕರಾದ ಡಾ. ಕೆಎಸ್‌ಎಂಎಸ್ ರಾಘವರಾವ್ ಅವರು ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಜೈವಿಕ ತಂತ್ರಜ್ಞಾನ ಸ್ನಾತಕೋತ್ತರ ವಿಭಾಗವು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಹುದುಗುವಿಕೆ ಪ್ರಕ್ರಿಯೆ ಮತ್ತು ದ್ರವ ವರ್ಣಶಾಸ್ತ್ರ' ಎಂಬ ವಿಷಯ ಕುರಿತ ಮೂರು ದಿನಗಳ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. "ಉತ್ಪನ್ನ, ಉತ್ಪಾದನೆಯಲ್ಲಿ ಪ್ರಮಾಣಕ್ಕಿಂತ ಗುಣಮಟ್ಟ ಮುಖ್ಯ. ಹುದುಗುವಿಕೆ ಮತ್ತು ದ್ರವವರ್ಣ ವಿಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ಇದನ್ನು ಕಾಪಾಡಿಕೊಳ್ಳಬಹುದು " ಎಂದರು.

ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಮಾತನಾಡಿ "ನಾಗರೀಕತೆಯ ಪ್ರಾರಂಭದಿಂದಲೂ ಹುದುಗುವಿಕೆ ಮತ್ತು ದ್ರವವರ್ಣ ವ್ಯವಸ್ಥೆಯನ್ನು ನಮ್ಮವರು ಅಳವಡಿಸಿಕೊಂಡು ಬಂದಿದ್ದಾರೆ. ಈ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆಯಬೇಕು" ಎಂದರು.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಾದ ಡಾ. ಎ.ಎಂ. ರಮೇಶ್ ಅವರು ಮಾತನಾಡಿ "ಕೃಷಿ ಕ್ಷೇತ್ರದಲ್ಲಿ ಜೈವಿಕ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಪೌಷ್ಟಿಕಾಂಶವುಳ್ಳ ಆಹಾರಗಳನ್ನು ಬೆಳೆಯಬೇಕು. ಯುವ ಪೀಳಿಗೆ ಇದರ ಬಗ್ಗೆ ಹೆಚ್ಚು ಗಮನ ಹರಿಸಿ ಕೃಷಿ ಕ್ಷೇತ್ರದ ಅಭಿವೃದ್ಧಿ ಮತ್ತು ಉತ್ತಮ ಆಹಾರ ಬೆಳವಣಿಗೆಯತ್ತ ಗಮನಹರಿಸಬೇಕು" ಎಂದರು

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು ಸ್ವಾಗತಿಸಿದರು. ವಿಭಾಗದ ಮುಖ್ಯಸ್ಥರಾದ ಡಾ. ಬಿ.ವೈ. ಸತೀಶ್‌ಕುಮಾರ್ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿ ವಿಚಾರ ಸಂಕಿರಣದ ಬಗ್ಗೆ ಮಾಹಿತಿ ನೀಡಿದರು. ಶ್ರೀ ಜಯಸಿಂಹ ಮತ್ತು ತಂಡದವರು ಪ್ರಾರ್ಥಿಸಿದರು. ಕು. ಎಸ್. ನಿಧಿ ವಂದಿಸಿದರು. ಕು. ಚಿಂತನ ನಿರೂಪಿಸಿದರು.

ಗೆ,
ಸಂಪಾದಕರು
-----------------
_______________

ಪ್ರಾಂಶುಪಾಲರು
ಪ್ರಾಂಶುಪಾಲರು
ಜೆ.ಎಸ್.ಎಸ್. ಕಾಲೇಜು
ಊಟಿ ರಸ್ತೆ, ಮೈಸೂರು-570 025

# KSTA Sponsored National Workshop
# On

# "Fermentation Process and Liquid Chromatography"

**14 -16 March 2019**



*Organized by*

Postgraduate Department of Biotechnology
**JSS College of Arts, Commerce & Science**
Ooty Road, Mysuru-570 025
Karnataka



JSS MAHAVIDYAPEETHA
JSS COLLEGE OF ARTS, COMMERCE & SCIENCE
(An Autonomous College of University of Mysore)
B.N. ROAD, MYSURU-570 025 KARNATAKA
Re-accredited by NAAC with 'A' grade
Recognised by UGC as "College with Potential for Excellence"
Ph: 0821-2548236 & 2548380. FAX: 0821-2548238 E-mail: jssautonomous@gmail.com Website: JSSCACS.edu.in

Date : 21.2.2019

# For the favor of Publication

**UGC Sponsored Two Day National Conference on "Current Trends in Mathematics"**

A UGC sponsored **Two day National Conference on "Current Trends in Mathematics"** was organized by the Departments of Mathematics, JSS College of Arts, Commerce and Science, Ooty Road, Mysuru on 21 and 22, February, 2019. The objective of the seminar is to promote scientific temper and awareness among the teachers, young researchers and students about the recent advances in the studies on the current trends in Mathematics.

**Prof. H.B.Walikar, former Vice Chancellor, Karnataka University, Dharwad inaugurated the conference, released the souvenir** and delivered the keynote address.. He spoke about the contribution of Indians in the field of Mathematics by introducing **'Zero'** to the world. Though the credit goes to Brahma Gupta of 5th B C. but it was present in the 3rd B C in Baksala Manuscript with many examples on the usage of Zero as a dot. Even in 12th Century Alamaprabhu has incorporated the concept of zero in his vachanas as **'Shunya'. Prof H. B. Walikar further added that "Zero as an incarnation of Shunya" had come from Indian philosophical background.**

**Prof. B. V. Sambashivaiah, Chief Executive,** JSS College Campus, Ooty Road Mysuru welcomed the dignitaries, invitees, teacher and student participants. Principal Prof. M. Mahadevappa proposed Vote of thanks. Prof. S. Linganna, Head of the Department and Dr. N. Ravikumar, Organizing Secretary were present in the Inaugural session. Invocation was by Kum Madhura and Sadhana of II M Sc Mathematics. The programme was compeered by Dr. Rajendraprasad. A total of 200 teachers and students participants have registered for the Conference.

To,
The Editor
--------------------------------

Principal
ಪ್ರಾಂಶುಪಾಲರು
ಜೆ.ಎಸ್.ಎಸ್. ಕಾಲೇಜು
ಊಟಿ ರಸ್ತೆ, ಮೈಸೂರು-570 025

ಜೆಎಸ್‌ಎಸ್ ಮಹಾವಿದ್ಯಾಪೀಠ
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ)
ಬಿ.ಎನ್. ರಸ್ತೆ, ಮೈಸೂರು –570025
ನ್ಯಾಕ್‌ನಿಂದ 'ಎ ದರ್ಜೆ ಮಾನ್ಯತೆ ಪಡೆದಿದೆ
ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

☎: 0821-2548236, 2548380 Fax: 0821-2548238 e-mail: jssautonomous@gmail.com

ದಿನಾಂಕ 21.2.2019

## ಪ್ರಕಟಣೆಯ ಕೃಪೆಗಾಗಿ
## ಭಾರತೀಯ ಗಣಿತ ಶಾಸ್ತ್ರಕ್ಕೆ ತತ್ವಶಾಸ್ತ್ರದ ಹಿನ್ನೆಲೆಯಿದೆ.

– ಪ್ರೊ. ಎಚ್. ಬಿ. ವಾಲಿಕಾರ್

"ಭಾರತೀಯ ಗಣಿತ ಶಾಸ್ತ್ರಕ್ಕೆ ತತ್ವಶಾಸ್ತ್ರದ ಹಿನ್ನೆಲೆಯಿದೆ. ಗಣಿತಶಾಸ್ತ್ರಕ್ಕಿಂತ ಮೊದಲು ಭಾರತೀಯ ತತ್ವಶಾಸ್ತ್ರದಲ್ಲಿ ಶೂನ್ಯದ ಚಿಂತನೆಗಳನ್ನು ಕಾಣುತ್ತೇವೆ. ಕರ್ನಾಟಕದ ವಚನ ಸಾಹಿತ್ಯದಲ್ಲಿ ಅಲ್ಲಮಪ್ರಭು ತಮ್ಮ ವಚನಗಳಲ್ಲಿ ಶೂನ್ಯ ಸಿದ್ಧಾಂತದ ಆಲೋಚನೆಗಳನ್ನು ನೀಡಿದ್ದಾರೆ. ಶೂನ್ಯದಲ್ಲಿ ವಿಶ್ವ ಹುಟ್ಟಿತ್ತು ಎಂಬ ಅವರ ಮಾತು ತಾತ್ವಿಕವಾಗಿ ಎಷ್ಟು ಮುಖ್ಯವೋ ಹಾಗೆಯೇ ಸೊನ್ನೆಯು ಗಣಿತ ಲೋಕಕ್ಕೆ ಅತ್ಯಗತ್ಯ ಎಂಬುದನ್ನು ತಿಳಿಸುತ್ತದೆ" ಎಂದು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾದ ಪ್ರೊ. ಎಚ್.ಬಿ. ವಾಲಿಕಾರ್ ಅವರು ಅಭಿಪ್ರಾಯಪಟ್ಟರು.

ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಗಣಿತ ಸ್ನಾತಕೋತ್ತರ ವಿಭಾಗವು ಯುಜಿಸಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಗಣಿತಲೋಕದ ಪ್ರಸಕ್ತ ಪ್ರವೃತ್ತಿಗಳು' ವಿಷಯ ಕುರಿತ ಎರಡು ದಿನಗಳ ರಾಷ್ಟ್ರೀಯ ಗಣಿತ ಸಮ್ಮೇಳನದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು. "ಸೊನ್ನೆಯು ಗಣಿತಲೋಕಕ್ಕೆ ಭಾರತದ ಕೊಡುಗೆ ಎಂದಷ್ಟೇ ತಿಳಿದುಕೊಂಡರೆ ಸಾಲದು. ಸೊನ್ನೆಯು ಭರತದಲ್ಲಿ ಹುಟ್ಟಿ ಬೆಳೆಯಲು ಅದಕ್ಕೆ ತನ್ನದೇ ಆದ ಸಾಂಸ್ಕೃತಿಕ ಇತಿಹಾಸವಿದೆ. ಬ್ರಹ್ಮಗುಪ್ತನಿಗಿಂತ ಮೊದಲು ಭಕ್ಷಾಲಿಯಲ್ಲಿ ದೊರೆಯುವ ಕೈಬರಹದಲ್ಲಿ ಇದರ ಪ್ರಸ್ತಾಪವಿದೆ. ರಾಮಾಯಣ ಮಹಾಭಾರತದಲ್ಲಿಯೂ ಶೂನ್ಯದ ವಿಚಾರಗಳಿವೆ. ಇದುವೇ ಮುಂದೆ ಗಣಿತ ಲೋಕಕ್ಕೆ ಪರಿಚಯಿಸಲ್ಪಟ್ಟಿತು. ಹೀಗೆ ಸೊನ್ನೆಯು ತತ್ವಶಾಸ್ತ್ರದ ಕೊಡುಗೆಯಾಗಿದ್ದು ಅದರ ಮೂಲಕ ಪ್ರಪಂಚದ ಗಣಿತಲೋಕವನ್ನು ಸೇರಿದೆ. ಇದು ಭಾರತೀಯರ ಹೆಮ್ಮೆ" ಎಂದು ಅವರು ಹೇಳಿದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಪ್ರಾಸ್ತಾವಿಕ ಮಾತುಗಳನ್ನಾಡಿ ಸ್ವಾಗತ ಕೋರಿದರು. ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು ವಂದಿಸಿದರು. ಕು. ಮಧುರ ಮತ್ತು ತಂಡದವರು ಪ್ರಾರ್ಥಿಸಿದರು. ಡಾ. ರಾಜೇಂದ್ರ ಪ್ರಸಾದ್ ನಿರೂಪಿಸಿದರು. ಎರಡು ದಿನಗಳ ಕಾಲ ನಡೆಯುವ ಈ ಸಮ್ಮೇಳನದಲ್ಲಿ ವಿವಿಧ ವಿಶ್ವವಿದ್ಯಾಲಯಗಳ, ಕಾಲೇಜುಗಳ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ.

ಗೆ,
ಸಂಪಾದಕರು
------------------
__________________

ಪ್ರಾಂಶುಪಾಲರು

JSS Mahavidyapeetha, Mysuru

# JSS COLLEGE OF ARTS, COMMERCE AND SCIENCE

Autonomous, NAAC 'A' Grade & College with Potential for Excellence

Ooty Road, Mysuru - 570 025

ज्ञान - विज्ञान विमुक्तये

UGC SPONSORED TWO DAY NATIONAL CONFERENCE ON

## CURRENT TRENDS IN MATHEMATICS

(NCCTM-2019)

**21 & 22 February 2019**

*INAUGURAL FUNCTION*

With the Blessings of

**Jagadguru Sri Shivarathri Deshikendra Mahaswamiji**

President, JSS Mahavidyapeetha, Mysuru

Inauguration and Keynote Address

**Prof. H. B. Walikar**

Former Vice Chancellor, Karnatak University, Dharwad

President

**Prof. G. Hemanth Kumar**

Vice Chancellor, University of Mysore, Mysuru

Presence

**Prof. B.V. Sambashivaiah**
Chief Executive

**Prof. M. Mahadevappa**
Principal


**Prof. S. Linganna**
Head of the Department

**Dr. N. Ravikumar**
Organizing Secretary

**21-2-2019, Thursday** **10.00 am**

Venue : **Golden Jubilee Hall**

ALL ARE CORDIALLY INVITED


JSS COLLEGE OF ARTS, COMMERCE AND SCIENCE
DEPARTMENT OF MATHEMATICS
Prof. H.B. WALIKAR

ಜೆಎಸ್‌ಎಸ್ ಮಹಾವಿದ್ಯಾಪೀಠ
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ)
ಬಿ.ಎನ್. ರಸ್ತೆ, ಮೈಸೂರು –570025
ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ
ಪ್ರಶಸ್ತಿ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

☎: 0821-2548236, 2548380 Fax: 0821-2548238 e-mail: jssautonomous@gmail.com

ದಿನಾಂಕ 28.6.2019

## ಪ್ರಕಟಣೆಯ ಕೃಪೆಗಾಗಿ

ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ 12 ಮಂದಿ ವಿದ್ಯಾರ್ಥಿಗಳು ಮೈಸೂರಿನ ಐಎಫ್‌ಬಿಐನವರು ನಡೆಸಿದ ಸ್ನಾತಕೋತ್ತರ ಡಿಪ್ಲೊಮಾ ಇನ್ ಬ್ಯಾಂಕಿಂಗ್ ಆಪರೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಕ್ಯಾಂಪಸ್ ಅಯ್ಕೆಯ ಮೂಲಕ ಐಸಿಐಸಿಐ ಬ್ಯಾಂಕಿನ ಉದ್ಯೋಗಕ್ಕೆ ನೇಮಕಗೊಂಡಿದ್ದಾರೆ.

ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಆಯ್ಕೆಯಾದ ವಿದ್ಯಾರ್ಥಿಗಳಿಗೆ ನೇಮಕಾತಿ ಪತ್ರವನ್ನು ನೀಡಿದರು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪ, ಮೈಸೂರಿನ ಐಎಫ್‌ಬಿಐ ನಿರ್ದೇಶಕರಾದ ಶ್ರೀ ಹಿರಣ್ಣಯ್ಯ ಉಪಸ್ಥಿತರಿದ್ದರು.

ಗೆ,
ಸಂಪಾದಕರು
------------------

ಪ್ರಾಂಶುಪಾಲರು
PRINCIPAL
J.S.S. College
Ooty Road, Mysore-570 025



ಜೆಎಸ್‌ಎಸ್ ಮಹಾವಿದ್ಯಾಪೀಠ
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಸ್ವಾಯತ್ತ)
ಊಟಿ ರಸ್ತೆ, ಮೈಸೂರು – 570 085
ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

Ph: 0821.2548236 &2548380. FAX: 0821.2548238 E.mail: jssautonomous@gmail.com Website:www. jsscacs.edu.i

ಸಂಖ್ಯೆ: ಜೆಎಸ್‌ಎಸ್‌ಸಿಎಂ/ /2019–20 ದಿನಾಂಕ: 21.11.2019

## ಪ್ರಕಟಣೆಯ ಕೃಪೆಗಾಗಿ

### ಹಿರಿಯ ನಾಗರಿಕರನ್ನು ಗೌರವದಿಂದ ಕಾಣುವುದು ಭಾರತೀಯ ಸಂಸ್ಕಾರ

– ಪ್ರೊ. ಬಿ.ವಿ ಸಾಂಬಶಿವಯ್ಯ

ನಗರದ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸ್ನಾತಕೋತ್ತರ ಸಮಾಜಕಾರ್ಯ ವಿಭಾಗವು ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ರಾಷ್ಟ್ರೀಯ ಸಾಮಾಜಿಕ ರಕ್ಷಣಾ ಇಲಾಖೆ, ಪ್ರಾಂತೀಯ ಸಂಪನ್ಮೂಲ ತರಬೇತಿ ಕೇಂದ್ರ, ನೈಟಿಂಗೇಲ್ ವೈದ್ಯಕೀಯ ಟ್ರಸ್ಟ್ ಬೆಂಗಳೂರು ಇವರುಗಳು ಸಹಯೋಗದಲ್ಲಿ ದಿನಾಂಕ.21.11.2019 ರಂದು **'ಅಂತರ ಪೀಳಿಗೆಯ ಬಂಧಗಳ ಬಗ್ಗೆ ಸ್ಪಂವೇದನ ಶೀಲತೆ' (Sensitization Programme on Inter-generational Bonding)** ಎಂಬ ವಿಷಯ ಕುರಿತು ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ ಸಾಂಬಶಿವಯ್ಯನವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತ "ಉತ್ತಮ ವೈದ್ಯಕೀಯ ವ್ಯವಸ್ಥೆಗಳಿಂದಾಗಿ ಜನರ ಜೀವಿತಾವಧಿ ಹೆಚ್ಚಾಗಿದ್ದು, ಇದರಿಂದ ದೇಶದಲ್ಲಿ ವೃದ್ಧರ ಸಂಖ್ಯೆ ಹೆಚ್ಚಾಗುತ್ತಿದೆ. ವಯಸ್ಸಿನ ಅಂತರದಿಂದಾಗಿ ಸಾಮಾಜಿಕವಾಗಿ ಹಾಗೂ ಮಾನಸಿಕವಾಗಿ ಅಂತರ ಹೆಚ್ಚಾಗುತ್ತಿದ್ದು, ಇದು ಒಳ್ಳೆಯ ಲಕ್ಷಣವಲ್ಲ. ಹಿರಿಯರನ್ನು ಗೌರವದಿಂದ ಕಾಣುವುದು ಭಾರತೀಯರಲ್ಲಿನ ಸಂಸ್ಕಾರವಾಗಿದ್ದು, ಕಿರಿಯರು ಹಿರಿಯರನ್ನು ನಿರ್ಲಕ್ಷಿಸಬಾರದು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ನೈಟಿಂಗೇಲ್ ಸಂಸ್ಥೆಯ ಶ್ರೀ ಪ್ರವೀಣ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವೇದಿಕೆಯಲ್ಲಿ ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಎಂ. ಮಹಾದೇವಪ್ಪ, ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಎಸ್. ಸೋಮಶೇಖರ್, ಸಮಾಜಕಾರ್ಯ ವಿಭಾಗದ ಮುಖ್ಯಸ್ಥರಾದ ಡಾ. ಎಂ.ಪಿ. ಸೋಮಶೇಖರ್, ಜೆಎಸ್‌ಎಸ್ ಆಸ್ಪತ್ರೆಯ ಹಿರಿಯ ನಾಗರೀಕರ ಸಹಾಯವಾಣಿಯ ಸಂಯೋಜನಾಧಿಕಾರಿ ಶ್ರೀ ಎಸ್. ಬಸವರಾಜು ಉಪಸ್ಥಿತರಿದ್ದರು. ಮೊದಲ ಅವಧಿಯಲ್ಲಿ ಡಾ. ಎಂ.ಪಿ. ಸೋಮಶೇಖರ್ 'ಹಿರಿಯ ನಾಗರೀಕರ ರಕ್ಷಣಾ ಕಾಯ್ದೆ'– 2007 ರ ಪ್ರಮುಖ ಅಂಶಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ಎರಡನೆಯ ಅವಧಿಯಲ್ಲಿ ಅಂತರ್ ಪೀಳಿಗೆಯ ಅಂತರದಿಂದಾಗುತ್ತಿರುವ ಸಮಸ್ಯೆಗಳ ಬಗ್ಗೆ ಡಾ. ಕುಮುದಿನಿಅಚ್ಚಿ ಮಾತನಾಡಿದರು. ಮೂರನೆ ಅವಧಿಯಲ್ಲಿ ಡಾ. ಸುಸ್ಮಿತ ಅಂತರ ಪೀಳಿಗೆಯಲ್ಲಿನ ಸಂವಹನ ಬಗ್ಗೆ ತಿಳಿಸಿದರು. ನಾಲ್ಕನೆ ಅವಧಿಯಲ್ಲಿ ಹಿರಿಯ ನಾಗರಿಕರ ಸಮಸ್ಯೆಗಳನ್ನು ನಿವಾರಿಸುವ ಬಗ್ಗೆ ಶ್ರೀ ಎಸ್ ಬಸವರಾಜು ಸಂವಾದ ನಡೆಸಿದರು.

ಶ್ರೀ ಎಸ್. ಬಸವರಾಜು ಸ್ವಾಗತಿಸಿದರು, ಡಾ.ಎಂ.ಪಿ. ಸೋಮಶೇಖರ್ ವಂದಿಸಿದರು. ಡಾ. ಕುಮುದಿನಿಅಚ್ಚಿ ನಿರೂಪಿಸಿದರು. ಕಾರ್ಯಕ್ರಮದಲ್ಲಿ 150ಕ್ಕೂ ಹೆಚ್ಚು ಸ್ನಾತಕೋತ್ತರ ಸಮಾಜಕಾರ್ಯ ಹಾಗೂ ಪಿಯುಸಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪ್ರಾಂಶುಪಾಲರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಊಟಿ ರಸ್ತೆ, ಮೈಸೂರು-25

ಗೆ

ಸಂಪಾದಕರು

----------------------------

----------------------------

ಎಡಗಡೆಯಿಂದ: ಡಾ. ಎಂ.ಪಿ. ಸೋಮಶೇಖರ್, ಪ್ರಾಂಶುಪಾಲರಾದ ಪ್ರೊ. ಎಂ. ಮಹಾದೇವಪ್ಪ, ಕಾರ್ಯನಿರ್ವಾಹಕರಾದ ಪ್ರೊ.ಬಿ.ವಿ. ಸಾಂಬಶಿವಯ್ಯ, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್. ಸೋಮಶೇಖರ್, ನೈಟಿಂಗೇಲ್ ಸಂಸ್ಥೆಯ ಶ್ರೀ ಪ್ರವೀಣ್, ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ಎಸ್. ಬಸವರಾಜು

ಜೆಎಸ್‌ಎಸ್ ಮಹಾವಿದ್ಯಾಪೀಠ
**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**
(ಸ್ವಾಯತ್ತ)
ಊಟಿ ರಸ್ತೆ, ಮೈಸೂರು – 570 085
ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

Ph: 0821.2548236 &2548380. FAX: 0821.2548238 E.mail: jssautonomous@gmail.com Website:www. jsscacs.edu.i

ಸಂಖ್ಯೆ: ಜೆಎಸ್‌ಎಸ್‌ಸಿಎಂ/ /2019–20

ದಿನಾಂಕ: 21.11.2019

## ಪ್ರಕಟಣೆಯ ಕೃಪೆಗಾಗಿ

### ಹಿರಿಯ ನಾಗರಿಕರನ್ನು ಗೌರವದಿಂದ ಕಾಣುವುದು ಭಾರತೀಯ ಸಂಸ್ಕಾರ

– ಪ್ರೊ. ಬಿ.ವಿ ಸಾಂಬಶಿವಯ್ಯ

ನಗರದ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸ್ನಾತಕೋತ್ತರ ಸಮಾಜಕಾರ್ಯ ವಿಭಾಗವು ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ರಾಷ್ಟ್ರೀಯ ಸಾಮಾಜಿಕ ರಕ್ಷಣಾ ಇಲಾಖೆ, ಪ್ರಾಂತೀಯ ಸಂಪನ್ಮೂಲ ತರಬೇತಿ ಕೇಂದ್ರ, ನೈಟಿಂಗೇಲ್ ವೈದ್ಯಕೀಯ ಟ್ರಸ್ಟ್ ಬೆಂಗಳೂರು ಇವರುಗಳು ಸಹಯೋಗದಲ್ಲಿ ದಿನಾಂಕ.21.11.2019 ರಂದು **'ಅಂತರ ಪೀಳಿಗೆಯ ಬಂಧಗಳ ಬಗ್ಗೆ ಸಂವೇದನ ಶೀಲತೆ' (Sensitization Programme on Inter-generational Bonding)** ಎಂಬ ವಿಷಯ ಕುರಿತು ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು,

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ ಸಾಂಬಶಿವಯ್ಯನವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತ "ಉತ್ತಮ ವೈದ್ಯಕೀಯ ವ್ಯವಸ್ಥೆಗಳಿಂದಾಗಿ ಜನರ ಜೀವಿತಾವಧಿ ಹೆಚ್ಚಾಗಿದ್ದು, ಇದರಿಂದ ದೇಶದಲ್ಲಿ ವೃದ್ಧರ ಸಂಖ್ಯೆ ಹೆಚ್ಚಾಗುತ್ತಿದೆ. ವಯಸ್ಸಿನ ಅಂತರದಿಂದಾಗಿ ಸಾಮಾಜಿಕವಾಗಿ ಹಾಗೂ ಮಾನಸಿಕವಾಗಿ ಅಂತರ ಹೆಚ್ಚಾಗುತ್ತಿದ್ದು, ಇದು ಒಳ್ಳೆಯ ಲಕ್ಷಣವಲ್ಲ. ಹಿರಿಯರನ್ನು ಗೌರವದಿಂದ ಕಾಣುವುದು ಭಾರತೀಯರಲ್ಲಿನ ಸಂಸ್ಕಾರವಾಗಿದ್ದು, ಕಿರಿಯರು ಹಿರಿಯರನ್ನು ನಿರ್ಲಕ್ಷಿಸಬಾರದು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ನೈಟಿಂಗೇಲ್ ಸಂಸ್ಥೆಯ ಶ್ರೀ ಪ್ರವೀಣ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವೇದಿಕೆಯಲ್ಲಿ ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಎಂ. ಮಹಾದೇವಪ್ಪ, ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಎಸ್. ಸೋಮಶೇಖರ್, ಸಮಾಜಕಾರ್ಯ ವಿಭಾಗದ ಮುಖ್ಯಸ್ಥರಾದ ಡಾ. ಎಂ.ಪಿ. ಸೋಮಶೇಖರ್, ಜೆಎಸ್‌ಎಸ್ ಆಸ್ಪತ್ರೆಯ ಹಿರಿಯ ನಾಗರೀಕರ ಸಹಾಯವಾಣಿಯ ಸಂಯೋಜನಾಧಿಕಾರಿ ಶ್ರೀ ಎಸ್. ಬಸವರಾಜು ಉಪಸ್ಥಿತರಿದ್ದರು. ಮೊದಲ ಅವಧಿಯಲ್ಲಿ ಡಾ. ಎಂ.ಪಿ. ಸೋಮಶೇಖರ್ 'ಹಿರಿಯ ನಾಗರೀಕರ ರಕ್ಷಣಾ ಕಾಯ್ದೆ'– 2007 ರ ಪ್ರಮುಖ ಅಂಶಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ಎರಡನೆಯ ಅವಧಿಯಲ್ಲಿ ಅಂತರ್ ಪೀಳಿಗೆಯ ಅಂತರದಿಂದಾಗುತ್ತಿರುವ ಸಮಸ್ಯೆಗಳ ಬಗ್ಗೆ ಡಾ. ಕುಮುದಿನಿಅಚ್ಚಿ ಮಾತನಾಡಿದರು. ಮೂರನೆ ಅವಧಿಯಲ್ಲಿ ಡಾ. ಸುಸ್ಮಿತ ಅಂತರ ಪೀಳಿಗೆಯಲ್ಲಿನ ಸಂವಹನ ಬಗ್ಗೆ ತಿಳಿಸಿದರು. ನಾಲ್ಕನೆ ಅವಧಿಯಲ್ಲಿ ಹಿರಿಯ ನಾಗರಿಕರ ಸಮಸ್ಯೆಗಳನ್ನು ನಿವಾರಿಸುವ ಬಗ್ಗೆ ಶ್ರೀ ಎಸ್ ಬಸವರಾಜು ಸಂವಾದ ನಡೆಸಿದರು.

ಶ್ರೀ ಎಸ್. ಬಸವರಾಜು ಸ್ವಾಗತಿಸಿದರು, ಡಾ.ಎಂ.ಪಿ. ಸೋಮಶೇಖರ್ ವಂದಿಸಿದರು. ಡಾ. ಕುಮುದಿನಿಅಚ್ಚಿ ನಿರೂಪಿಸಿದರು. ಕಾರ್ಯಕ್ರಮದಲ್ಲಿ 150ಕ್ಕೂ ಹೆಚ್ಚು ಸ್ನಾತಕೋತ್ತರ ಸಮಾಜಕಾರ್ಯ ಹಾಗೂ ಪಿಯುಸಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪ್ರಾಂಶುಪಾಲರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಊಟಿ ರಸ್ತೆ, ಮೈಸೂರು-25

ಗೆ

ಸಂಪಾದಕರು

---------------------------

---------------------------

ಎಡಗಡೆಯಿಂದ: ಡಾ. ಎಂ.ಪಿ. ಸೋಮಶೇಖರ್, ಪ್ರಾಂಶುಪಾಲರಾದ ಪ್ರೊ. ಎಂ. ಮಹಾದೇವಪ್ಪ, ಕಾರ್ಯನಿರ್ವಾಹಕರಾದ ಪ್ರೊ.ಬಿ.ವಿ. ಸಾಂಬಶಿವಯ್ಯ, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್. ಸೋಮಶೇಖರ್, ನೈಟಿಂಗೇಲ್ ಸಂಸ್ಥೆಯ ಶ್ರೀ ಪ್ರವೀಣ್, ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ಎಸ್. ಬಸವರಾಜು

JSS MAHAVIDYAPEETHA

# JSS COLLEGE OF ARTS, COMMERCE & SCIENCE

Autonomous, 'A' Grade and College with Potential for Excellence

**B.N. ROAD, MYSURU-570 025 KARNATAKA**

Ph: 0821-2548236 & 2548380. FAX: 0821-2548238

E-mail: jssautonomous@gmail.com Website: JSSCACS.edu.in

ದಿನಾಂಕ : 7.3.2020

## ಪ್ರಕಟಣೆಯ ಕೃಪೆಗಾಗಿ

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ದಿನಾಂಕ 7.3.2020 ರಂದು "ನ್ಯೂ ಇನವೇಷನ್ ಇನ್ ಅಡ್ವಾನ್ಸ್ಡ್ ಮೆಟಿರಿಯಲ್ಸ್" (New Innovations in Advanced Materials) ಎಂಬ ವಿಷಯದ ಕುರಿತು ಯುಜಿಸಿ ಪ್ರಾಯೋಜಿತ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣವನ್ನು ರಸಾಯನಶಾಸ್ತ್ರ ವಿಭಾಗದಿಂದ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ (ಮೌಲ್ಯಮಾಪನ) ಪ್ರೊ. ಕೆ. ಎಮ್. ಮಹದೇವನ್ ಅವರು "ಸಮಾಜದ ಐತಿಹಾಸಿಕ ಬೆಳವಣಿಗೆಯನ್ನು ಮತ್ತು ಅದರಲ್ಲಿ ವಿಜ್ಞಾನದ ಮಹತ್ವವನ್ನು ಅವಲೋಕಿಸಿದಾಗ ಅವುಗಳಲ್ಲಿ ಬಹುತರದಲ್ಲಿ ವಿಸ್ಮಯ ಕ್ರಿಯೆಗಳು ನಡೆದಿರುವುದು ನಮಗೆ ಗೋಚರವಾಗುತ್ತದೆ. ವಿಜ್ಞಾನದಲ್ಲಿ ಪ್ರೋಟಾನ್, ನ್ಯೂಟ್ರಾನ್ ಮತ್ತು ಎಲೆಕ್ಟ್ರಾನ್‌ಗಳನ್ನು ಕ್ರಮವಾಗಿ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರನೊಂದಿಗೆ ಹೋಲಿಸಿ ನಮ್ಮ ವಿಜ್ಞಾನ ಮತ್ತು ಸಮಾಜ ಸಂಸ್ಕೃತಿಯಲ್ಲಿನ ವೈಶಿಷ್ಟ್ಯಗಳನ್ನು ಹೇಳುತ್ತಾ ಬ್ರಹ್ಮಾಂಡದ ಸೃಷ್ಟಿಯಲ್ಲಿನ ಭಾರತೀಯರ ಕಲ್ಪನೆ ಮತ್ತು ವಿಜ್ಞಾನದ ಕಲ್ಪನೆಯನ್ನು ವಿವರಿಸಿದರು. ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಮುಂತಾದ ವಿವಿಧ ವಿಷಯಗಳಲ್ಲಿ ಅನೇಕ ರೀತಿಯ ಆವಿಷ್ಕಾರಗಳಿಗೆ ವಿಜ್ಞಾನ ಅವಕಾಶ ಮಾಡಿಕೊಟ್ಟಿದೆ ಎಂದು ತಿಳಿಸಿದರು. ಪರಮಾಣು ಬಾಂಬುಗಳಲ್ಲಿನ ಯುರೇನಿಯಂ ಸಂಯುಕ್ತಗಳಂತಹ ರಾಸಾಯನಿಕ ವಸ್ತುಗಳ ಕ್ರಿಯೆಯನ್ನು ಪ್ರೊ. ಮಹದೇವನ್ ವಿವರಿಸಿ ವಿಜ್ಞಾನದಲ್ಲಿ ಸಂಶೋಧಕರು ಪ್ರಸ್ತುತ ಲಭ್ಯವಿರುವ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಹೊಸ ಆವಿಷ್ಕಾರಗಳಿಗೆ ತೆರೆದುಕೊಳ್ಳಬೇಕೆಂದು ಆಶಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಡಾ. ಎಸ್. ಶ್ರೀಕಂಠಸ್ವಾಮಿ ಅವರು ಶತಮಾನಗಳಿಂದ ಹಲವಾರು ಉದ್ದೇಶಗಳಿಗಾಗಿ ಬಳಸುವ ವಸ್ತುಗಳ ಬಗ್ಗೆ ಮಾತನಾಡುತ್ತಾ "ಆಕಸ್ಮಿಕವಾಗಿ ಆವಿಷ್ಕರಿಸಲ್ಪಟ್ಟ ಇಂಗಾಲದ ಅಲೋಟ್ರೋಪಿ, ಫುಲ್ಲರೀನ್ ಬಗ್ಗೆ ವಿವರಿಸಿದರು. ಭವಿಷ್ಯದ ಮಾನವ ಜನಾಂಗದ ಅಭಿವೃದ್ಧಿಗೆ ಪದಾರ್ಥ ವಿಜ್ಞಾನ ಕ್ಷೇತ್ರವು ಹೊಸ ಕೊಡುಗೆಗಳಿಂದ ಪ್ರಾಬಲ್ಯ ಸಾಧಿಸಿಕೊಂಡು ಬಂದಿದೆ" ಎಂದು ವ್ಯಕ್ತಪಡಿಸಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ತಮ್ಮ ಅಧ್ಯಕ್ಷೀಯ ನುಡಿಯಲ್ಲಿ "ಕಾಲೇಜಿನ ಸುದೀರ್ಘ ಬೆಳವಣಿಗೆ ಮತ್ತು ಸಾಧನೆಗಳನ್ನು ಪ್ರಸ್ತಾಪಿಸುತ್ತಾ, ಪ್ರೊ. ಕೆ. ಮಹದೇವನ್ ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಹೇಳಿದ್ದನ್ನು ಸಮರ್ಥಿಸಿಕೊಂಡರು. ಇಂದಿನ ವರ್ತಮಾನದ ಬದುಕಿಗೆ ವಿಭಿನ್ನ ವಸ್ತುಗಳ ಅನ್ವಯಗಳ ಮಹತ್ವವನ್ನು ವಿವರಿಸಿದರು. ಬಹಳ ಹಿಂದೆಯೇ ವಿಜ್ಞಾನಿಗಳು ಹೇಳಿದಂತೆ ಪ್ರಸ್ತುತ ದಿನಗಳಲ್ಲಿ ಪದಾರ್ಥ ವಿಜ್ಞಾನ ಪ್ರಧಾನ ಪಾತ್ರವನ್ನು ವಹಿಸಿರುವ ಬಗೆಯನ್ನು ವಿವರಿಸಿ ವೈಜ್ಞಾನಿಕ ಕ್ಷೇತ್ರಗಳಲ್ಲಿ ಆಗಿರುವ ಹೊಸ ಸಾಧನೆ ಮತ್ತು ಆವಿಷ್ಕಾರಗಳು ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಮತ್ತು ಉತ್ತಮ ಭವಿಷ್ಯಕ್ಕೆ ಹೊಸ ವಸ್ತುಗಳು ಅಗತ್ಯವೆಂದರು.

ವೇದಿಕೆಯಲ್ಲಿ ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಮತ್ತು ವಿಚಾರ ಸಂಕಿರಣದ ಸಂಚಾಲಕ ಡಾ. ಎಲ್. ಮಲ್ಲೇಶ ಹಾಗೂ ವಿಚಾರ ಸಂಕಿರಣದ ಸಂಘಟನಾ ಕಾರ್ಯದರ್ಶಿ ಡಾ. ಸಿ. ಮಲ್ಲಿಕಾರ್ಜುನ ಸ್ವಾಮಿ ಅವರು ಉಪಸ್ಥಿತರಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು ಸ್ವಾಗತಿಸಿದರು. ಸ್ಪಂದನ ಮತ್ತು ಯಶಸ್ವಿನಿರವರು ಪ್ರಾರ್ಥಿಸಿದರು. ಮಂಜುನಾಥ್ ಅವರು ನಿರೂಪಿಸಿದರು.

ಪ್ರಾಂಶುಪಾಲರು

ಗೆ,

-----------

JSS MAHAVIDYAPEETHA

**JSS COLLEGE OF ARTS, COMMERCE & SCIENCE**

Autonomous, 'A' Grade and College with Potential for Excellence

**B.N. ROAD, MYSURU-570 025 KARNATAKA**

Ph: 0821-2548236 & 2548380. FAX: 0821-2548238

E-mail: jssautonomous@gmail.com Website: JSSCACS.edu.in

To,

The Editor

......................

## PRESS REPORT

A UGC Sponsored One Day State Level Seminar on "New Innovations in Advanced Materials" has been inaugurated by Prof. K. M. Mahadevan, Registrar (Evaluation) of University of Mysore, Mysuru, on 7th March 2020 at Golden Jubilee Hall of the College.

In his inaugural address, Prof. Mahadevan addressed the historical overview and importance of science to each of the multifaceted activities in the Universe. He compared protons, neutrons and electrons with Brahma, Vishnu and Maheshwara, respectively, with the roles playing by each of them in creation of Universe and phenomenal activities of them to enrich the human functioning through achievements. He opined that the un-hindered science gave human the opportune to invent many aspects in different fields like Physics, Chemistry, Biology, etc. Prof. Mahadevan described the action of chemical materials like Uranium compounds in atom bombs and others in the reactions, namely, fission and fusion. He shared that the researchers are well utilizing each available matter to invent many things to make the world fabulous. He wished that the gift of wonderful materials by nature is going to be grabbed in more quanta by next decades so that the researchers can contribute many other outcomes and are served to the society.

The Chief Guest of the programme, Dr. S. Srikantaswamy, Director, College Development Council, University of Mysore, Mysuru, delivered a speech on the applications of various materials used by the people of workers since centuries for diverse purposes. He has quoted the invention of Fullerene, an allotropy of carbon, use of natural minerals and chemical substances as materials for wider applications. He has highlighted that the material science will be dominating in future activities for human developments.

Prof. B.V Sambashivaiah, Chief Executive of the College Presided over the function. In his presidential remarks, Prof. Sambashivaiah highlighted the various credentials and milestones of the college since its inception to till date for the information of guests, faculty, researchers and students of other institutes. He has justified the invention of many scientific truths and existence of Universe as stated by Prof. K. M. Mahadevan. Prof. Sambashivaiah addressed the applications of different materials for present day scenario. He brought the fact of key role playing by materials in present days as said by scientists long ago. He also stressed upon need for newer materials for better tomorrow for overall development of society with scientific adventures.

Prof. M. Mahadevappa, Principal of the College welcomed the Guests, Dignitaries, Faculty, Students and others who were present in the occasion. Dr. L. Mallesha, Head of PG Department of Chemistry and Convener, and Dr. C. Mallikarjunaswamy, Organizing Secretary were also present. Miss. Spandana and Miss. Yashaswini rendered the invocation. Mr. Manjunath compered the programme.

PRINCIPAL,


NANO-RASAYANI

ಜೆಎಸ್‌ಎಸ್ ಮಹಾವಿದ್ಯಾಪೀಠ
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ)
ಬಿ.ಎನ್. ರಸ್ತೆ, ಮೈಸೂರು –570025
ನ್ಯಾಕ್‌ನಿಂದ 'ಎ ದರ್ಜೆ ಮಾನ್ಯತೆ ಪಡೆದಿದೆ
ಪ್ರತಿಷ್ಠಿತ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

☎: 0821-2548236, 2548380 Fax: 0821-2548238 e-mail: jssautonomous@gmail.com

ದಿನಾಂಕ 14.2.2019

ಪ್ರಕಟಣೆಯ ಕೃಪೆಗಾಗಿ

## ಮಾನವನ ಹಸ್ತಕ್ಷೇಪದಿಂದ ಪರಿಸರದ ಮೇಲೆ ತೀವ್ರ ಪರಿಣಾಮ

– ಶ್ರೀ ಸಿದ್ರಾಮಪ್ಪ, ಅರಣ್ಯ ಸಂರಕ್ಷಣಾಧಿಕಾರಿಗಳು

"ಜಗತ್ತಿನ ಜನಸಂಖ್ಯೆ ೭೦೦ ಕೋಟಿ ದಾಟಿದ್ದು, ಜನವಸತಿಗಾಗಿ ಮನುಷ್ಯ ಶೇ. ೭೦ ಭಾಗ ಭೂಮಿಯನ್ನು ಆಕ್ರಮಿಸಿಕೊಂಡಿದ್ದಾನೆ. ಜಗತ್ತಿನಲ್ಲಿ ಶೇ. ೩೦ ರಷ್ಟು ಮಾತ್ರ ಅರಣ್ಯ ಪ್ರದೇಶವಿದೆ. ಇತ್ತೀಚೆಗೆ ಪರಿಸರದ ಮೇಲೆ ಮಾನವನ ಹಸ್ತಕ್ಷೇಪ ಹೆಚ್ಚಾಗಿದ್ದು ಜೀವ ವೈವಿಧ್ಯತೆಯ ಮೇಲೆ ತೀವ್ರ ಪರಿಣಾಮ ಉಂಟಾಗುತ್ತಿದೆ" ಎಂದು ಮೈಸೂರು ವನ್ಯಜೀವಿ ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿಗಳಾದ ಶ್ರೀ ಸಿದ್ರಾಮಪ್ಪನವರು ಅಭಿಪ್ರಾಯ ಪಟ್ಟರು.

ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಪ್ರಾಣಿಶಾಸ್ತ್ರ ಸ್ನಾತಕೋತ್ತರ ವಿಭಾಗದ ವತಿಯಿಂದ "ಪರಿಸರದ ಮೇಲಿನ ಮಾನವ ಅಡಚಣೆಗಳು : ಪರಿಕಲ್ಪನೆ ಮತ್ತು ಕಾಳಜಿ" ಕುರಿತ ಒಂದು ದಿನದ ರಾಜ್ಯ ಮಟ್ಟದ ವಿಚಾರಸಂಕಿರಣದ ಮುಖ್ಯ ಭಾಷಣಕಾರರಾಗಿ ಆಗಮಿಸಿ ಅವರು ಮಾತನಾಡಿದರು. "ಮನುಷ್ಯನ ಸ್ವಾರ್ಥ ಸಾಧನೆಗೆ ಪರಿಸರವನ್ನು ಹಾಳುಮಾಡಲಾಗುತ್ತಿದೆ. ಪರಿಸರವು ಜಗತ್ತಿನ ಎಲ್ಲಾ ಜೀವರಾಶಿಗಳಿಗೂ ಅವಾಸಸ್ಥಾನವಾಗಿದೆ. ಭೂಮಿಯ ಮೇಲೆ ಮನುಷ್ಯನು ಬೇರೆಲ್ಲ ಜೀವಿಗಳಿಗಿಂತ ಬುದ್ಧಿವಂತನಾಗಿದ್ದು, ಆದರೆ ಮನುಷ್ಯನ ಹಸ್ತಕ್ಷೇಪದಿಂದ ಪರಿಸರ ಹಾಳಾಗುತ್ತಿದೆ. ಪರಿಸರ ನಾಶದಿಂದ ಭೂಮಿಯ ಫಲವತ್ತತೆ ಕಡಿಮೆಯಾಗಿ, ಅಂತರ್ಜಲ ಕುಸಿಯುತ್ತಿದೆ. ವಾಯುಮಾಲಿನ್ಯ, ಜಲಮಾಲಿನ್ಯ, ಕೃಷಿಯೇತರ ಚಟುವಟಿಕೆ, ವಾಣಿಜ್ಯೀಕರಣದಿಂದ ಪರಿಸರ ನಾಶವಾಗುತ್ತಿದೆ. ಆದ್ದರಿಂದ ಮನುಷ್ಯನಿಂದಾಗುತ್ತಿರುವ ಅರಣ್ಯನಾಶ, ಪ್ರಾಣಿ–ಪಕ್ಷಿಗಳ ಹತ್ಯೆಗಳಿಗೆ ಕಡಿವಾಣ ಹಾಕಿ ಪರಿಸರ ರಕ್ಷಣೆಗೆ ಪ್ರತಿಯೊಬ್ಬರು ಕೈ ಜೊಡಿಸಬೇಕು" ಎಂದರು.

ವಿಚಾರಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಮಾತನಾಡಿ "ವಾಯುಮಾಲಿನ್ಯದಿಂದ ಹೆಚ್ಚು ಪರಿಸರ ನಾಶವಾಗುತ್ತಿದೆ. ಮಿತಿಮೀರಿದ ಜನಸಂಖ್ಯೆ, ಕ್ಷಿಪ್ರ ಕೈಗಾರಿಕೆ ಮತ್ತು ತಾಂತ್ರಿಕ ಅಭಿವೃದ್ಧಿ, ನಗರೀಕರಣದಿಂದಲೂ ಪರಿಸರದಲ್ಲಿ ಏರುಪೇರಾಗಿ ಜೀವವೈವಿಧ್ಯತೆ ನಾಶವಾಗುತ್ತಿದೆ. ಅದನ್ನು ಕಾಪಾಡಲು ಸರ್ಕಾರ ಸ್ಥಳೀಯ ಸಂಘಸಂಸ್ಥೆಗಳ ಸಹಾಯ ಪಡೆದು ಕ್ರಮ ಜರುಗಿಸಬೇಕು" ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು ಸ್ವಾಗತ ಕೋರಿದರು. ಕು. ವೀಣಾಶ್ರೀ ಮತ್ತು ತಂಡದವರು ಪ್ರಾರ್ಥಿಸಿದರು. ವಿಚಾರಸಂಕಿರಣದ ಸಂಘಟನಾ ಕಾರ್ಯದರ್ಶಿಗಳಾದ ಡಾ. ಬಿ. ಎಸ್. ನಿಜಗಲ್ ವಂದಿಸಿದರು. ಕು. ಬಿ.ಜಿ. ಅಕ್ಷತಾ ನಿರೂಪಿಸಿದರು.

ಚೆನ್ನೈನ ಅಣ್ಣಾ ವಿಶ್ವವಿದ್ಯಾನಿಲಯದ ಪರಿಸರ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರಾದ ಪ್ರೊ. ಗಣಪತಿ ವೆಂಕಟಸುಬ್ರಮಣಿಯನ್, ಮೈಸೂರು ವಿಶ್ವವಿದ್ಯಾನಿಲಯ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದ ಸಹಪ್ರಾಧ್ಯಾಪಕರಾದ ಡಾ. ಎಸ್. ಬಸವರಾಜಪ್ಪ ವಿಷಯ ತಜ್ಞರಾಗಿ ಆಗಮಿಸಿದ್ದರು. ವಿಚಾರ ಸಂಕಿರಣದ ಸಂಚಾಲಕರಾದ ಡಾ. ಕೆ. ಎಸ್. ರಘುನಂದನ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿವಿಧ ಕಾಲೇಜುಗಳ ಅಧ್ಯಾಪಕರು, ವಿದ್ಯಾರ್ಥಿಗಳು ವಿಚಾರ ಸಂಕಿರಣದಲ್ಲಿ ಪಾಲ್ಗೊಂಡರು.

ಗೆ,
ಸಂಪಾದಕರು
--------------------

ಪ್ರಾಂಶುಪಾಲರು

JSS MAHAVIDYAPEETHA
JSS COLLEGE OF ARTS, COMMERCE & SCIENCE
(An Autonomous College of University of Mysore)
B.N. ROAD, MYSURU-570 025 KARNATAKA
Re-accredited by NAAC with 'A' grade
Recognised by UGC as "College with Potential for Excellence"
Ph: 0821-2548236 & 2548380. FAX: 0821-2548238 E-mail: jssautonomous@gmail.com Website: JSSCACS.edu.in

Date: 14.02.2019

# PRESS NOTE

## One Day State Level Seminar on *"Human Interferences on Environment - Concepts and Concern"*

A one day state level Seminar on **"Human Interferences on Environment - Concepts and Concern"** for undergraduate, postgraduate students and teachers was organised by the Postgraduate Department of Zoology, JSS College of Arts, Commerce and Science, Ooty Road, Mysuru on 13.02.2019. The program was inaugurated by Sri. Sidramappa, IFS, Deputy Conservator of Forests, Wildlife Division, Mysuru. In his keynote address he explained that, World population has increased beyond 700crores, and humans have occupied 70% of earth's available land. At present only 30% of forest is left in the world. There is a large impact on environment due to human interferences. Human Greed and Desire has led to environmental pollution. Humans are more intellect than other organisms on earth, a favorable environment is required for the survival of all the organisms but due to the interference of humans the environment is being polluted. Due to Air pollution, Water Pollution, Agricultural activities and Commercialization the environment is becoming unfavorable for the existence of organisms. In addition to this, deforestation, habitat destruction has led to the death of many indigenous species of animals. Henceforth, conservation of environment is duty of every citizen.

Prof. B V Sambashivaiah, Chief Executive of the College presided over the function and in his presidential address he emphasised on importance of environment and he also said that, due to the agriculture and industrial activities, deforestation and burning of fossil fuels Air pollution has increased and thereby Climate Change. Exponential increase in global population has led to technological and industrial development within a short span of time which is also a factor for air pollution. This has led to the reduction in biodiversity. Government has to take initiatives with the aid of local and NGOs to protect the environment.

More than 150 Undergraduate and Postgraduate students from various Colleges of Mysuru took part in the Seminar. Prof. M Mahadevappa, Principal of the College welcomed the guests. Dr. Nijagal, B. S., Head of the PG Department of Zoology, proposed vote of thanks. Ms. Veenashree and Group, II M.Sc., Zoology rendered invocation and Dr. K. S. Raghunandan, Assistant Professor of PG Zoology, Convener of the Seminar compeered.

Principal

To
Editor
------------
Mysuru



ಜೆಎಸ್‌ಎಸ್ ಮಹಾವಿದ್ಯಾಪೀಠ
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಸ್ವಾಯತ್ತ)
ಊಟಿ ರಸ್ತೆ, ಮೈಸೂರು – 570 025
ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

Ph: 0821.2548236 &2548380. FAX: 0821.2548238 E.mail: jssautonomous@gmail.com Website:www.jsscacs.edu.in

ಸಂಖ್ಯೆ: ಜೆಎಸ್‌ಎಸ್‌ಸಿಎಂ/ /2019–20 ದಿನಾಂಕ: 11.03.2020

ಪ್ರಕಟಣೆಯ ಕೃಪೆಗಾಗಿ

ತ್ಯಾಜ್ಯವನ್ನು ಸಂಪತ್ತಾಗಿ ಬದಲಾಯಿಸಬೇಕು

ಡಾ. ಕೆ. ಎ. ಅನು ಅಪ್ಪಯ್ಯ

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಸ್ನಾತಕ ಸಸ್ಯಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ ಹಾಗೂ ಜೀವರಸಾಯನಶಾಸ್ತ್ರ ವಿಭಾಗಗಳ ವತಿಯಿಂದ ದಿನಾಂಕ.05.03.2020 ರಂದು ಆಯೋಜಿಸಿದ್ದ "ಜೀವ ವಿಜ್ಞಾನದಲ್ಲಿ ಆವಿಷ್ಕಾರ ಮತ್ತು ಸವಾಲುಗಳು" ಎಂಬ ಯುಜಿಸಿ ಪ್ರಾಯೋಜಿತ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಮೈಸೂರಿನ ಸಿಎಫ್‌ಟಿಆರ್‌ಐನ ಸೂಕ್ಷ್ಮಜೀವಶಾಸ್ತ್ರ ಮತ್ತು ಹುದುಗುವಿಕೆ ತಂತ್ರಜ್ಞಾನ ವಿಜ್ಞಾನಿ ಡಾ. ಕೆ. ಎ. ಅನು ಅಪ್ಪಯ್ಯ ಅವರು ಉದ್ಘಾಟಿಸಿದರು. ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ತ್ಯಾಜ್ಯನಿರ್ವಹಣೆ ಬಹುದೊಡ್ಡ ಪ್ರಮುಖ ಸಮಸ್ಯೆಯಾಗಿದ್ದು, ಅದನ್ನು ಸುಸ್ಥಿರ ಪರ್ಯಾಯ ಜೀವನೋಪಾಯವಾಗಿ ಹೇಗೆ ಪರಿವರ್ತಿಸಬೇಕು? [illegible] ಜಾಗತಿಕ ಮಟ್ಟದಲ್ಲಿ ಯೋಚಿಸಿ, ಸ್ಥಳೀಯವಾಗಿ [illegible] ತ್ಯಾಜ್ಯವನ್ನು ಸಂಪತ್ತಾಗಿ ಬದಲಾಯಿಸಿಕೊಳ್ಳಬೇಕು. ತ್ಯಾಜ್ಯನಿರ್ವಹಣೆಯನ್ನು ವಿಭಿನ್ನ ದೃಷ್ಟಿಕೋನದಲ್ಲಿ ಆಲೋಚಿಸಬೇಕು ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಅನ್ವೇಷಣೆ, ಆವಿಷ್ಕಾರ ಮತ್ತು ಆವಿಷ್ಕಾರದಲ್ಲಿ ನಾವೀನ್ಯತೆ–ಇವುಗಳಿಗೆ ವ್ಯತ್ಯಾಸವಿದೆ. ಬದುಕಿನ ವಿವಿಧ ಮಜಲುಗಳಲ್ಲಿ ಆವಿಷ್ಕರಣೆ–ಪರಿಷ್ಕರಣೆಗಳ ಅವಶ್ಯಕತೆ ಇದೆ ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥರು ಮತ್ತು ಸಂಘಟನಾ ಕಾರ್ಯದರ್ಶಿಯವರಾದ ಡಾ. ಎಸ್. ಪ್ರತಿಭಾರವರು ಸ್ವಾಗತಿಸಿದರು. ಜೀವರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರು ಮತ್ತು ಸಂಯೋಜಕರಾದ ಡಾ. ಎಂ.ಎಸ್. ಮಂಜುನಾಥ್‌ರವರು ವಂದನೆಗಳನ್ನು ಸಲ್ಲಿಸಿದರು. ಸಸ್ಯಶಾಸ್ತ್ರ ವಿಭಾಗದ ಉಪನ್ಯಾಸಕರಾದ ಬಿ.ಎಲ್. ಕಿರಣ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು, ದ್ವಿತೀಯ ಬಿಎಸ್ಸಿ ವಿದ್ಯಾರ್ಥಿನಿಯಾದ ಕೆ.ಎಸ್. ಸನ್ನಿಧಿ ರವರು ಪ್ರಾರ್ಥಿಸಿದರು. ವಿಚಾರಸಂಕಿರಣದಲ್ಲಿ 50ಕ್ಕೂ ಹೆಚ್ಚು ಅಧ್ಯಾಪಕರು ಮತ್ತು 300 ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು,

ಪ್ರಾಚಾರ್ಯರಿಗೆ

